(ಈ) ಕಲಬೆರಕೆ ತೊಂದರೆಯ ಗಂಭೀರತೆಯ ಬಗ್ಗೆ ಸರ್ಕಾರಕ್ಕೆ ಅರಿವಿದೆ.

(ಉ) ಹೌದು. ಸೂಕ್ತವಾದ ಪ್ರಕರಣಗಳಲ್ಲಿ ಮುಂದಿನ ನ್ಯಾಯಾಲಯಕ್ಕೆ ಅಫೀಲು ಹೋಗಲು ಜರೂರಾಗಿ ಕ್ರಮ ಕೈಗೊಳ್ಳಲಾಗುವುದು.

(ಊ) ಉದ್ಭವಿಸುವುದಿಲ್ಲ.

ಆಡಳಿತದಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯ ಅಳವಡಿಕೆ

1858 (2498) ಶ್ರೀ ರಾಜೇಂದ್ರ ವರ್ಮಾ (ಹುಲ್‌ಸೂರ್):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಮುಖ್ಯಮಂತ್ರಿಗಳವರ ಸಚಿವಾಲಯವನ್ನು ಹೊರತುಪಡಿಸಿ ಇತರ ಎಲ್ಲಾ ಸಚಿವರ ಆಪ್ತ ಶಾಖೆಗಳಲ್ಲಿ ಆಪ್ತಕಾರ್ಯದರ್ಶಿಗಳು ಹಾಗೂ ವಿಶೇಷಾಧಿಕಾರಿಗಳ ವಿವರಗಳೇನು ಹಾಗೂ ಇವರುಗಳ ಮಾತೃ ಇಲಾಖೆಗಳು ಯಾವುವು;

(ಆ) ಇವರುಗಳ ಪೈಕಿ ಕೆಲವರು ಇಲಾಖಾ ವಿಚಾರಣೆ ಶಿಸ್ತಿನ ಕ್ರಮಗಳನ್ನು ಎದುರಿಸಿರುವವರು ಹಾಗೂ ಎದುರಿಸುತ್ತಿರುವವರು ಸೇರಿರುವುದು ನಿಜವೆ;

(ಇ) ಹಾಗಿದ್ದಲ್ಲಿ ಅಂತಹವರುಗಳ ವಿವರಗಳೇನು;

(ಈ) ಮುಖ್ಯಮಂತ್ರಿಗಳವರು ರಾಜ್ಯದ ಜನತೆಗೆ ದಕ್ಷ ಸ್ವಚ್ಛ ಹಾಗೂ ಪಾರದರ್ಶಕತೆಯ ಆಡಳಿತವನ್ನು ನೀಡುವುದಾಗಿ ಭರವಸೆ ನೀಡಿರುವುದು ನಿಜವಲ್ಲವೆ;

(ಉ) ಹಾಗಿದ್ದಲ್ಲಿ ಇಂತಹ ಅಧಿಕಾರಿಗಳನ್ನು ಇಟ್ಟುಕೊಂಡು ಜನತೆಗೆ ಉತ್ತಮ ಆಡಳಿತವನ್ನು ನೀಡಲು ಸಾಧ್ಯವೆ;

(ಊ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

(ಆ) ಹೌದು.

(ಇ) ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

(ಈ) ಹೌದು.

(ಉ) ಇಲಾಖಾ ವಿಚಾರಣೆಗಳನ್ನು ಎದುರಿಸುತ್ತಿರುವ ಅಧಿಕಾರಿಗಳ ವಿರುದ್ಧದ ದೋಷಾರೋಪಣೆಗಳ ಗಂಭೀರತೆಯನ್ನು ಪರಿಶೀಲಿಸಿದ ನಂತರವೇ ಮಾನ್ಯ ಸಚಿವರುಗಳ ಕೋರಿಕೆಯ ಮೇಲೆ ಇವರುಗಳನ್ನು ನೇಮಿಸಲಾಗಿದೆ.

(ಊ) ಉದ್ಭವಿಸುವುದಿಲ್ಲ.

## ಅನುಬಂಧ-1

ಸಚಿವರ ಆಪ್ತ ಶಾಖೆಗಳಲ್ಲಿ ಆಪ್ತ ಕಾರ್ಯದರ್ಶಿಗಳಾಗಿ ಹಾಗೂ ವಿಶೇಷ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ವಿವರ

| ಕ್ರಮ ಸಂಖ್ಯೆ | ಅಧಿಕಾರಿಯ ಹೆಸರು ಮತ್ತು ಪದನಾಮ | | ಅಧಿಕಾರಿಯ ಮಾತೃ ಇಲಾಖೆ |
|---|---|---|---|
| 1 | 2 | | 3 |
| 1. | ಎಸ್.ಎಫ್. ಯೋಗಪ್ಪನವರ್<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ<br>ಸಚಿವರ ಆಪ್ತಕಾರ್ಯದರ್ಶಿ. | - | ಸಿಆಸುಇ |
| 2. | ಕೆ. ರಾಮೇಗೌಡ<br>ಕಂದಾಯ ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 3. | ಆರ್.ಆರ್.ಜನ್ನು<br>ಉನ್ನತ ಶಿಕ್ಷಣ ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 4. | ಹೆಚ್.ದೇವೆಂದ್ರಪ್ಪ<br>ಸಣ್ಣ ಉಳಿತಾಯ ಮತ್ತು ಮುಜರಾಯಿ<br>ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 5. | ಕೆ.ಎಸ್. ಯಡಿಯೂರಪ್ಪ<br>ತೋಟಗಾರಿಕೆ ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 6. | ಎಸ್. ಪುಟ್ಟಸ್ವಾಮಿ<br>ಪಶುಸಂಗೋಪನಾ ಮತ್ತು ಸಕ್ಕರೆ<br>ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 7. | ಟಿ.ಸಿ. ಕೃಷ್ಣಸ್ವಾಮಿ<br>ಗಣಿ ಮತ್ತು ಭೂವಿಜ್ಞಾನ<br>ಸಚಿವರ ಆಪ್ತಕಾಯದರ್ಶಿ | - | ಸಿಆಸುಇ |
| 8. | ಸಿ.ಎನ್. ನಾಯಕ್<br>ಕೃಷಿ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |

| 1 | 2 | | 3 |
|---|---|---|---|
| 9. | ಕೆ.ಎಸ್. ಸತ್ಯಮೂರ್ತಿ<br>ಅರಣ್ಯ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 10. | ಬಿ.ಎನ್. ಸುರೇಶ್<br>ಕನ್ನಡ ಮತ್ತು ಸಂಸ್ಕೃತಿ ಇಲಾಖಾ<br>ಸಚಿವರ ಆಪ್ತಕಾರ್ಯದರ್ಶಿ. | - | ಸಿಆಸುಇ |
| 11. | ಎಸ್.ಜಿ. ಬಿರಾದಾರ್<br>ಸಣ್ಣ ಕೈಗಾರಿಕಾ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 12. | ಸಿ.ಎಂ. ರಾಜೇಂದ್ರ<br>ಮೀನುಗಾರಿಕೆ, ಬಂದರು ಮತ್ತು<br>ಪ್ರದೇಶಾಭಿವೃದ್ಧಿ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 13. | ಹೆಚ್.ಎಲ್. ರವಿ ಪ್ರಕಾಶ್<br>ಗೃಹ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 14. | ಬಿ. ಪಿರಾನಾಯಕ್<br>ಸಮಾಜ ಕಲ್ಯಾಣ ರಾಜ್ಯ ಸಚಿವರ<br>ಆಪ್ತಕಾರ್ಯದರ್ಶಿ. | - | ಸಿಆಸುಇ |
| 15. | ಎ.ವಿ. ಪ್ರಸನ್ನ<br>ಯೋಜನಾ ರಾಜ್ಯ ಸಚಿವರ<br>ಆಪ್ತಕಾರ್ಯದರ್ಶಿ | - | ಸಿಆಸುಇ |
| 16. | ಸೈಯದ್ ಎಜಾಜ್ ಅಹಮದ್<br>ಪ್ರವಾಸೋದ್ಯಮ ಮತ್ತು ಹಜ್ ಸಚಿವರ<br>ಆಪ್ತಕಾರ್ಯದರ್ಶಿ. | - | ಸಿಆಸುಇ |
| 17. | ಎ.ಎನ್. ತೋರ್‌ಗಲ್<br>ಬೃಹತ್ ಮತ್ತು ಮಧ್ಯಮ ನೀರಾವರಿ<br>ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 18. | ಬಿ.ಹೆಚ್ ಸಿದ್ಧಪ್ಪ<br>ಪುರಸಭೆಗಳು ಮತ್ತು ನಗರಸಭೆಗಳ ರಾಜ್ಯ<br>ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |

| 1 | 2 | | 3 |
|---|---|---|---|
| 19. | ಅತೀಕ್ ಅಹಮದ್<br>ಸಾರಿಗೆ ಸಚಿವರ ಆಪ್ತಕಾರ್ಯದರ್ಶಿ | - | ಸಿಆಸುಇ |
| 20. | ಎನ್. ಶಾಂತಪ್ಪ<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ<br>ಸಚಿವರ ಆಪ್ತಕಾರ್ಯದರ್ಶಿ. | - | ಸಿಆಸುಇ |
| 21. | ಮಿರ್ಜಾ ಅಕ್ಬರುಲ್ಲಾ<br>ವೈದ್ಯಕೀಯ ಶಿಕ್ಷಣ ಸಚಿವರ<br>ಆಪ್ತಕಾರ್ಯದರ್ಶಿ | - | ಸಿಆಸುಇ |
| 22. | ಎಂ.ಎಂ. ಮಹದೇವೇಗೌಡ<br>ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ<br>ಸಚಿವರ ಆಪ್ತಕಾರ್ಯದರ್ಶಿ. | - | ಸಿಆಸುಇ |
| 23. | ಮುಜಬುಲ್ಲಾ ಜಫಾರಿ<br>ಸಮಾಜ ಕಲ್ಯಾಣ ಸಚಿವರ<br>ಆಪ್ತಕಾರ್ಯದರ್ಶಿ | - | ಸಿಆಸುಇ |
| 24. | ಜೆ.ಎಸ್. ವಿರೂಪಾಕ್ಷಯ್ಯ<br>ವಿಧಾನ ಸಭಾ ವಿರೋಧ ಪಕ್ಷದ .<br>ನಾಯಕರ ಆಪ್ತಕಾರ್ಯದರ್ಶಿ. | - | ಸಿಆಸುಇ |
| 25. | ಇ.ಎನ್. ಚವಾಣ್<br>ಇಂಧನ ಸಚಿವರ ಆಪ್ತಕಾರ್ಯದರ್ಶಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 26. | ಎಂ.ಎನ್. ವಿಜೇಂದ್ರರಾವ್<br>ಅಬಕಾರಿ ಸಚಿವರ ಆಪ್ತಕಾರ್ಯದರ್ಶಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 27. | ಕೆ.ಎನ್. ವಿಜಯಪ್ರಕಾಶ್<br>ಸಣ್ಣ ನೀರಾವರಿ ರಾಜ್ಯ ಸಚಿವರ<br>ಆಪ್ತಕಾರ್ಯದರ್ಶಿ. | - | ಆರ್.ಡಿ.ಪಿ.ಆರ್. |
| 28. | ಕೆ. ವಿಶ್ವನಾಥ್ ರೆಡ್ಡಿ<br>ಸಹಕಾರ ಸಚಿವರ ಆಪ್ತಕಾರ್ಯದರ್ಶಿ | - | ಕಂದಾಯ ಇಲಾಖೆ |

| 1 | 2 | | 3 |
|---|---|---|---|
| 29. | ಪಿ.ಜಿ. ಡಿಸೋಜಾ<br>ಮೂಲಭೂತ ಸೌಕರ್ಯ ಅಭಿವೃದ್ಧಿ<br>ರಾಜ್ಯ ಸಚಿವರ ಆಪ್ತಕಾರ್ಯದರ್ಶಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ<br>ನಿವೃತ್ತ ಅಧಿಕಾರಿ ಗುತ್ತಿಗೆ ನೇಮಕ |
| 30. | ಬಿ.ಎಸ್. ದೇವಾನಂದ್<br>ವಾರ್ತಾ ಸಚಿವರ ಆಪ್ತಕಾರ್ಯದರ್ಶಿ. | - | ಶಿಕ್ಷಣ ಇಲಾಖೆ |
| 31. | ಎಸ್. ದಯಾಶಂಕರ್<br>ರೇಷ್ಮೆ ಮತ್ತು ಜವಳಿ ಸಚಿವರ<br>ಆಪ್ತಕಾರ್ಯದರ್ಶಿ. | - | ರಾಜ್ಯ ಲೆಕ್ಕಪತ್ರ ಇಲಾಖೆ |
| 32. | ಆರ್. ರಾಮಪ್ರಿಯಾ<br>ಕಾನೂನು ಮತ್ತು ಸಂಸದೀಯ<br>ವ್ಯವಹಾರಗಳ ಸಚಿವರ<br>ಆಪ್ತಕಾರ್ಯದರ್ಶಿ. | - | ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ |
| 33. | ವಿ. ನಾರಾಯಣ ಸ್ವಾಮಿ<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್<br>ರಾಜ್ ಸಚಿವರ ಆಪ್ತಕಾರ್ಯದರ್ಶಿ. | - | ಶಿಕ್ಷಣ ಇಲಾಖೆ |
| 34. | ಹೆಚ್.ಎಂ. ವಿರೂಪಾಕ್ಷಯ್ಯ<br>ಕೃಷಿ ಮಾರುಕಟ್ಟೆ ರಾಜ್ಯ ಸಚಿವರ<br>ಆಪ್ತಕಾರ್ಯದರ್ಶಿ. | - | ವಾಣಿಜ್ಯ ತೆರಿಗೆ ಇಲಾಖೆ |
| 35. | ಎಲ್.ನಾಗರಾಜ್ ಮೂರ್ತಿ<br>ಹಣಕಾಸು ರಾಜ್ಯ ಸಚಿವರ<br>ಆಪ್ತಕಾರ್ಯದರ್ಶಿ. | - | ಪದವಿಪೂರ್ವ ಶಿಕ್ಷಣ ಇಲಾಖೆ |
| 36. | ನರಸಿಂಹಮೂರ್ತಿ.<br>ಆಹಾರ ಮತ್ತು ನಾಗರೀಕ ಸರಬರಾಜು<br>ಸಚಿವರ ಆಪ್ತಕಾರ್ಯದರ್ಶಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ |

| 1 | 2 | | 3 |
|---|---|---|---|
| 37. | ಎಂ.ಆರ್. ಬಾಲಕೃಷ್ಣ<br>ನಗರಾಭಿವೃದ್ಧಿ ಮತ್ತು ನಗರ ಯೋಜನಾ<br>ಸಚಿವರ ವಿಶೇಷ ಕರ್ತವ್ಯಾಧಿಕಾರಿ. | - | ಆರ್.ಡಿ.ಪಿ.ಆರ್. |
| 38. | ಕೆ.ಬಿ. ಬಸಪ್ಪ<br>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್<br>ರಾಜ್ ಸಚಿವರ ವಿಶೇಷ ಕರ್ತವ್ಯಾಧಿಕಾರಿ. | - | ಆರ್.ಡಿ.ಪಿ.ಆರ್.<br>ನಿವೃತ್ತ ಅಧಿಕಾರಿ ಗುತ್ತಿಗೆ ನೇಮಕ |
| 39. | ಮಹಮದ್ ಅಜಾಮ್<br>ಕಾರ್ಮಿಕ ಮತ್ತು ವಕ್ಫ್ ಸಚಿವರ<br>ಆಪ್ತಕಾರ್ಯದರ್ಶಿ. | - | ಕಾಲೇಜು ಶಿಕ್ಷಣ ಇಲಾಖೆ |
| 40. | ಭೀಮಸೇನ ಬಂಕರ್<br>ಪಶುಸಂಗೋಪನೆ ಮತ್ತು ಸಕ್ಕರೆ<br>ಸಚಿವರ ವಿಶೇಷ ಕರ್ತವ್ಯಾಧಿಕಾರಿ. | - | ಸಹಕಾರ ಇಲಾಖೆ |
| 41. | ಹೆಚ್.ಎನ್. ಪ್ರಸಾದ್<br>ಲೋಕೋಪಯೋಗಿ ಸಚಿವರ<br>ವಿಶೇಷಾಧಿಕಾರಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 42. | ದಾಸೇಗೌಡ<br>ಕಂದಾಯ ಸಚಿವರ ವಿಶೇಷಾಧಿಕಾರಿ | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 43. | ರಾಮಚಂದ್ರ<br>ಗೃಹ ಸಚಿರರ ವಿಶೇಷ ಕರ್ತವ್ಯಾಧಿಕಾರಿ | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 44. | ಆರ್. ನಿಸ್ಸಾರ್ ಅಹಮದ್<br>ವಸತಿ ಸಚಿವರ ಆಪ್ತಕಾರ್ಯದರ್ಶಿ. | - | ಕರ್ನಾಟಕ ಸರ್ಕಾರಿ ಸಚಿವಾಲಯ |
| 45. | ಮುಸ್ತಾಫ್ ಬೇಗ್<br>ಸಾರಿಗೆ ಮಂತ್ರಿಗಳ ವಿಶೇಷ<br>ಕರ್ತವ್ಯಾಧಿಕಾರಿ. | - | ಪದವಿ ಪೂರ್ವ ಶಿಕ್ಷಣ ಇಲಾಖೆ |
| 46. | ಎಸ್.ಎ. ಜಿಲಾನಿ<br>ಕಾರ್ಮಿಕ ಮತ್ತು ವಕ್ಫ್ ಸಚಿವರ<br>ಆಪ್ತಕಾರ್ಯದರ್ಶಿ. | - | ಸಿಆಸುಇ |

| 1 | 2 | | 3 |
|---|---|---|---|
| 47. | ಕೆ.ಆರ್. ಕಮಲೇಶ್<br>ಭಾರಿ ಮತ್ತು ಮಧ್ಯಮ ಕೈಗಾರಿಕಾ<br>ಸಚಿವರ ವಿಶೇಷ ಕರ್ತವ್ಯಾಧಿಕಾರಿ. | - | ಸಾರ್ವಜನಿಕ ಶಿಕ್ಷಣ ಇಲಾಖೆ |
| 48. | ಜೋಶಿ.<br>ಗಣಿ ಮತ್ತು ಭೂವಿಜ್ಞಾನ ಸಚಿವರ<br>ಆಪ್ತಕಾರ್ಯದರ್ಶಿ. | - | ಕರ್ನಾಟಕ ವಿಧಾನ ಮಂಡಲ<br>ಸಚಿವಾಲಯ |
| 49. | ಶಿವಣ್ಣ,<br>ಗೃಹ ಸಚಿವರ ವಿಶೇಷಾಧಿಕಾರಿ | - | ಕರ್ನಾಟಕ ವಿಧಾನ ಮಂಡಲ<br>ಸಚಿವಾಲಯ |
| 50. | ಎಂ.ಎನ್. ವಿಜಯೇಂದ್ರ<br>ಗೃಹ ಸಚಿವರ ವಿಶೇಷಾಧಿಕಾರಿ. | - | ಗುತ್ತಿಗೆ ಆಧಾರದ ನೇಮಕಾತಿ |

## ಅನುಬಂಧ - 2

ಇಲಾಖಾ ವಿಚಾರಣೆ ಶಿಸ್ತಿನ ಕ್ರಮಗಳನ್ನು ಎದುರಿಸಿರುವವರು ಹಾಗೂ
ಎದುರಿಸುತ್ತಿರುವವರ ವಿವರ.

1) ಇಲಾಖಾ ವಿಚಾರಣೆ, ಶಿಸ್ತಿನ ಕ್ರಮಗಳನ್ನು ಎದುರಿಸಿರುವವರು

1. ಎಸ್.ಎಫ್. ಯೋಗಪ್ಪನವರ್ - ದೋಷಾರೋಪಣೆಗಳಿಂದ ಮುಕ್ತರನ್ನಾಗಿಸಿದೆ.
2. ಹೆಚ್.ದೇವೇಂದ್ರಪ್ಪ - ದೋಷಾರೋಪಣೆಗಳಿಂದ ಮುಕ್ತರನ್ನಾಗಿಸಿದೆ.
3. ಬಿ.ಎನ್. ಸುರೇಶ್ - ದೋಷಾರೋಪಣೆಗಳಿಂದ ಮುಕ್ತರನ್ನಾಗಿಸಿದೆ.
4. ಟಿ.ಸಿ. ಕೃಷ್ಣಸ್ವಾಮಿ - ದೋಷಾರೋಪಣೆಗಳಿಂದ ಮುಕ್ತರನ್ನಾಗಿಸಿದೆ.
5. ಎಸ್.ಎ. ಜಿಲಾನಿ - ದೋಷಾರೋಪಣೆಗಳಿಂದ ಮುಕ್ತರನ್ನಾಗಿಸಿದೆ.

2) ಇಲಾಖಾ ವಿಚಾರಣೆ, ಶಿಸ್ತಿನ ಕ್ರಮಗಳನ್ನು ಎದುರಿಸಿರುವವರು

1. ಕೆ.ಎನ್. ಸತ್ಯಮೂರ್ತಿ - ಮೈಸೂರು ನಗಾರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ನಿವೇಶನ ಹಂಚಿಕೆ ಮತ್ತು ಇತ್ಯಾದಿ ವಿಷಯಗಳ ಅಕ್ರಮಗಳನ್ನು ಎಸಗಿದ ಆರೋಪಗಳಿಂದ ಸಿಸಿಎ ನಿಯಮಗಳ

ನಿಯಮ 11 ರಡಿಯಲ್ಲಿ ನೋಡಿ ಜಾರಿ ಮಾಡುವ ಮೂಲಕ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ. ಅಧಿಕಾರಿಯು ದೋಷಾರೋಪಣೆ ಪಟ್ಟಿಗೆ ಸಲ್ಲಿಸಿದ ಪ್ರತಿವಾದದ ಲಿಖಿತ ಹೇಳಿಕೆಯಲ್ಲಿ ಆರೋಪಗಳನ್ನು ನಿರಾಕರಿಸಿರುತ್ತಾರೆ. ಅದಾಗ್ಯೂ ಸದರಿಯವರು ಸಲ್ಲಿಸಿರುವ ಪ್ರತಿವಾದದ ಲಿಖಿತ ಹೇಳಿಕೆಯನ್ನು ಕೊಳ್ಳುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿದೆ. ಹೀಗಾಗಿ ವಿಚಾರಣೆಯು ಇನ್ನೂ ಇನ್ನೂ ಬಾಕಿ ಇರುತ್ತದೆ.

2. ಭೀಮಸೇನಾ ಬಂಕದ್ - ಇವರಿಗೆ ಸಂಬಂಧಿಸಿದಂತೆ ಒಂದು ಇಲಾಖಾ ವಿಚಾರಣಾ ಪ್ರಕರಣ ಬಾಕಿ ಇರುತ್ತದೆ. ಈ ಇಲಾಖಾ ವಿಚಾರಣಾ ಪ್ರಕರಣದ ಬಗ್ಗೆ ಅಧಿಕಾರಿಯು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

## ಹುಲಸೂರಿನಲ್ಲಿ 33 ಕೆವಿ ಉಪ ಠಾಣೆಯನ್ನು ಸ್ಥಾಪನೆ

1859 (2299) ಶ್ರೀ ರಾಜೇಂದ್ರ ವರ್ಮಾ (ಹುಲ್‌ಸೂರ್):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ 33 ಕೆ.ವಿ. ಉಪ ಠಾಣೆಯನ್ನು ಸ್ಥಾಪಿಸುವ ಸಲುವಾಗಿ ಸರ್ಕಾರಕ್ಕೆ 5 ಪ್ರಸ್ತಾವನೆಗಳು ಬಂದಿರುವುದು ನಿಜವಲ್ಲವೇ;

(ಆ) ಹಾಗಿದ್ದಲ್ಲಿ, ಈ ಪ್ರಸ್ತಾವನೆಗಳು ಯಾವಾಗ ಸರ್ಕಾರದ ಗಮನಕ್ಕೆ ಬಂದಿವೆ;

(ಇ) ಯಾವ ಯಾವ ಸ್ಥಳಗಳಲ್ಲಿ ಈ 33 ಕೆವಿ ಉಪ-ಠಾಣೆಗಳನ್ನು ಸ್ಥಾಪಿಸಲಾಗುವುದು;

(ಈ) ಹುಲಸೂರು ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುತ್ ಸರಬರಾಜಿನಲ್ಲಿ ಏರಿಳಿತ ಹಾಗೂ ಅಡಚಣೆಗಳನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರ ಈ ಸಾಲಿನಲ್ಲಿ ಈ 43 ಕೆ.ವಿ. ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸುವುದೇ?

ಶ್ರೀ ವೀರಕುಮಾರ್ ಪಾಟೀಲ್ (ಮಾನ್ಯ ಇಂಧನ ರಾಜ್ಯ ಸಚಿವರು)

(ಅ) ಹೌದು, ಹುಲಸೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 5 ಸ್ಥಳಗಳಲ್ಲಿ 33:11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಕ.ವಿ.ಪ್ರ.ನಿ.ಗೆ ಪ್ರಸ್ತಾಪನೆಗಳು ಬಂದಿರುತ್ತವೆ.